MAY 31, 2025

# AKASHAVANI - DHARWAD

# PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

**1). ದೇಶಿ ಉತ್ಪನ್ನಕ್ಕೆ, ಎಂ.ಎಸ್.ಎಂ.ಇ. ವಲಯದ ಕೊಡುಗೆ, ಶೇಕಡ 30 – ಶೋಭಾ ಕರಂದ್ಲಾಜೆ.**

**2). ಧಾರವಾಡ ಜಿಲ್ಲೆಯ, ಅಳ್ನಾವರ ಸೇರಿ, ರಾಜ್ಯದ 49 ತಾಲೂಕುಗಳಲ್ಲಿ, ಪ್ರಜಾಸೌಧ ನಿರ್ಮಾಣಕ್ಕೆ, ಒಪ್ಪಿಗೆ.**

**3). ವಿಕಸಿತ ಕೃಷಿ ಸಂಕಲ್ಪ ರಾಷ್ಟ್ರೀಯ ಅಭಿಯಾನ; ರೈತರ ಕಡೆ, ವಿಜ್ಞಾನಿಗಳ ನಡೆ.**

**4). ಇಂದು 'ವಿಶ್ವ ತಂಬಾಕು ರಹಿತ ದಿನ'; ರಾಜ್ಯಾದ್ಯಂತ ಜನ ಜಾಗೃತಿ, ಜಾಥಾ.**

<><><>

**ಈಗ ವಾರ್ತೆಗಳ ವಿವರ**

<><><>

**ದೇಶದಲ್ಲಿ, ಕಳೆದ 10 ವರ್ಷಗಳ ಅವಧಿಯಲ್ಲಿ, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ– ಎಂ.ಎಸ್.ಎಂ.ಇ. ವಲಯಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ, ಹೆಚ್ಚಿನ ಆದ್ಯತೆ ನೀಡಿದೆ ಹಾಗೂ ಒಟ್ಟು ದೇಶಿಯ ಉತ್ಪನ್ನ–ಜಿಡಿಪಿಗೆ ಎಂ.ಎಸ್.ಎಂ.ಇ ವಲಯದ ಕೊಡುಗೆ ಶೇಕಡ 30 ರಷ್ಟಿದೆ ಎಂದು ಕೇಂದ್ರ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ ಖಾತೆ, ರಾಜ್ಯ ಸಚಿವರಾದ ಶೋಭಾ ಕರಂದ್ಲಾಜೆ ಹೇಳಿದರು. ಬೆಂಗಳೂರು ಅರಮನೆ ಮೈದಾನ, ತ್ರಿಪುರ ವಾಸಿನಿ ವೇದಿಕೆಯಲ್ಲಿ ಆರಂಭಗೊಂಡ, ಇಂಡಿಯಾ ಎಂ.ಎಸ್.ಎಂ.ಇ ಸಮಾವೇಶ–2025 ಉದ್ಘಾಟಿಸಿ ಅವರು ಮಾತನಾಡಿದರು. 2047ರ ವೇಳೆಗೆ, ವಿಕಸಿತ ಭಾರತದ ಸಂಕಲ್ಪ ಸಾಕಾರಗೊಳಿಸುವ ನಿಟ್ಟಿನಲ್ಲಿ, ಕೃಷಿ ಜೊತೆಗೆ ಎಂ.ಎಸ್.ಎಂ.ಇ. ಕ್ಷೇತ್ರಗಳಿಗೆ ಹೆಚ್ಚಿನ ಆದ್ಯತೆ ನೀಡಿ, ಉದ್ಯೋಗ ಸೃಷ್ಟಿಸುವ ಕೆಲಸ ಮಾಡಲಾಗುತ್ತಿದೆ ಎಂದು ಹೇಳಿದರು. ದೇಶದಲ್ಲಿ ಒಂದು ಲಕ್ಷಕ್ಕೂ ಅಧಿಕ ನವೋದ್ಯಮಗಳಿದ್ದು, ಈ ಪೈಕಿ ಕರ್ನಾಟಕದಲ್ಲಿ ಸರಿಸುಮಾರು 5 ಸಾವಿರ ನವೋದ್ಯಮಗಳು ಇವೆ ಎಂದರು.**

<><><>

**ಶಾಲಾ ಶಿಕ್ಷಣದಲ್ಲಿ ಪಠ್ಯ ಕ್ರಮದ ಜೊತೆ ನೀತಿ ಹಾಗೂ ಮೌಲ್ಯಯುತ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಬೇಕು ಎಂದು, ವಿಧಾನ ಪರಿಷತ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು. ಹುಬ್ಬಳ್ಳಿ ಗ್ರಾಮೀಣ, ತಾಲೂಕು ವಲಯದ 2025–26 ನೇ ಸಾಲಿನ,**

ಶಾಲಾ ಪ್ರಾರಂಭೋತ್ಸವಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಹೊಸದಾಗಿ ದಾಖಲಾದ ಮಕ್ಕಳನ್ನು ಸಿಂಗರಿಸಿದ ಎತ್ತಿನ ಗಾಡಿಗಳಲ್ಲಿ ಶಾಲೆಗೆ  ಕರೆತರಲಾಯಿತು. ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರ, ಪಠ್ಯಪುಸ್ತಕಗಳ ಜೊತೆ ಸಿಹಿ ಹಂಚಲಾಯಿತು.

<><><>

ಮೈಸೂರು ತೊಣಚಿಕೊಪ್ಪಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ, 2025–26 ನೇ ಸಾಲಿನ ಶಾಲಾ ಪ್ರಾರಂಭೋತ್ಸವಕ್ಕೆ ಕೃಷ್ಣರಾಜ ಕ್ಷೇತ್ರದ ಶಾಸಕ ಶ್ರೀವತ್ಸ ಚಾಲನೆ ನೀಡಿದರು.

<><><>

ಕಳೆದ ಎರಡು ವರ್ಷಗಳಲ್ಲಿ ರಾಯಚೂರು, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಜಿಲ್ಲಾ ಪ್ರಜಾಸೌಧ, ಆಡಳಿತ ಕೇಂದ್ರ, ಕಟ್ಟಡ ಕಾಮಗಾರಿಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿದೆ. ಬೀದರ ಜಿಲ್ಲಾ ಪ್ರಜಾಸೌಧವನ್ನು 48 ಕೋಟಿ 32 ಲಕ್ಷ ರೂಪಾಯಿ ಹಾಗೂ ವಿಜಯಪುರ ಜಿಲ್ಲಾ ಪ್ರಜಾಸೌಧವನ್ನು 55 ಕೋಟಿ 60 ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಮಾವೇಶದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಇದೇ ಸಂದರ್ಭ ಧಾರವಾಡ ಜಿಲ್ಲೆ ಅಳ್ನಾವರ , ಬೆಳಗಾವಿ ಜಿಲ್ಲೆ ಕಾಗವಾಡ ಸೇರಿದಂತೆ, 49 ಹೊಸ ತಾಲೂಕು, ಪ್ರಜಾಸೌಧ ಕಟ್ಟಡ ನಿರ್ಮಾಣದ ಮಂಜೂರಾತಿ ಪತ್ರಗಳನ್ನು ಆಯಾ ಜಿಲ್ಲಾಧಿಕಾರಿಗಳಿಗೆ ವಿತರಿಸಿದರು.

<><><>

'ಕರಾಳ ಉದ್ದೇಶಗಳನ್ನು ಹೊಂದಿರುವ, ಪ್ರಕಾಶಮಾನವಾದ ಉತ್ಪನ್ನಗಳ ಮುಖವಾಡ ಬಹಿರಂಗಪಡಿಸುವುದು' ಎಂಬ ಧ್ಯೇಯದೊಂದಿಗೆ, ಇಂದು ವಿಶ್ವ ತಂಬಾಕು ರಹಿತ ದಿನ ಆಚರಿಸಲಾಗುತ್ತಿದೆ. ತಂಬಾಕು ಮತ್ತು ನಿಕೊಟಿನ್ ಹೊಂದಿರುವ ಆಕರ್ಷಕ ಉತ್ಪನ್ನಗಳಿಂದ ಆಕರ್ಷಿತರಾಗದೆ, ಅವುಗಳನ್ನು ಬಳಸದಂತೆ, ಧಾರವಾಡ ಜಿಲ್ಲಾ ಆರೋಗ್ಯಾಧಿಕಾರಿ ಡಾಕ್ಟರ್ ಎಸ್.ಎನ್ ಹೊನಕೇರಿ ಅವರು ಪ್ರದೇಶ ಸಮಾಚಾರದ ಮೂಲಕ ಮನವಿ ಮಾಡಿದ್ದಾರೆ. .

<><><>

ಧ್ವನಿ: ಎಸ್.ಎನ್ ಹೊನಕೇರಿ 43 ಸೆಕೆಂದುಗಳು

<><><>

ಚಿಕ್ಕಬಳ್ಳಾಪುರ ಜಿಲ್ಲೆ, ಎಲ್ಲ ಸರ್ಕಾರಿ ಸರ್ಕಾರಿ ಆಸ್ಪತ್ರೆಗಳಲ್ಲಿ, ಕೊವಿಡ್ ಪರೀಕ್ಷೆ ಆರಂಭಿಸಲಾಗಿದೆ, ಈ ತನಕ ಕೊವಿಡ್ ಪ್ರಕರಣಗಳು ಪತ್ತೆಯಾಗಿಲ್ಲ, ಸಾರ್ವಜನಿಕರು ಭಯಪಡುವ ಅಗತ್ಯವಿಲ್ಲ, ಧೈರ್ಯ ಹಾಗೂ ಎಚ್ಚರದಿಂದ ಇರಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾಕ್ಟರ ಎಸ್.ಎಸ್ ಮಹೇಶ ಹೇಳಿದ್ದಾರೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಶಿವಮೊಗ್ಗ, ಕೆಳದಿ ಶಿವ್ವ ನಾಯಕ ಕೃಷಿ ಮತ್ತು ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ, ಕೇಂದ್ರ ಕೃಷಿ ಮಂತ್ರಾಲಯದ ನಿರ್ದೇಶನದಂತೆ, ಜೂನ್ 12 ರವರೆಗೆ, 15 ದಿನಗಳ ಕಾಲ 'ವಿಕಸಿತ ಕೃಷಿ ಸಂಕಲ್ಪ, ರಾಷ್ಟ್ರೀಯ ಅಭಿಯಾನ' ಆರಂಭಿಸಿದೆ. ಕೃಷಿ ವಿಜ್ಞಾನಿಗಳು, ವಿವಿಧ ಗ್ರಾಮಗಳಿಗೆ ತೆರಳಿ ರೈತರ ಸಮಸ್ಯೆಗಳನ್ನು ಆಲಿಸಿ, ಪರಿಹಾರವನ್ನು ಸೂಚಿಸುತ್ತಿದ್ದಾರೆ. ಈ ಬಗ್ಗೆ ಹೆಚ್ಚಿನ ಮಾಹಿತಿ ನೀಡಿದ್ದಾರೆ ವಿಶ್ವವಿದ್ಯಾಲಯದ ಉಪ ಕುಲಪತಿ ಡಾಕ್ಟರ ಆರ್.ಸಿ ಜಗದೀಶ ...

<><><>

ಧ್ವನಿ: ಡಾಕ್ಟರ ಆರ್.ಸಿ ಜಗದೀಶ 38 ಸೆಕೆಂದುಗಳು

<><><>

ದಾವಣಗೆರೆ ಜಿಲ್ಲೆ, ಜಗಳೂರು ತಾಲೂಕು ಮುಸ್ಟೂರು ಗ್ರಾಮದಲ್ಲಿ ಆಯೋಜಿಸಲಾದ ವಿಕಸಿತ ಕೃಷಿ ಸಂಕಲ್ಪ ಅಭಿಯಾನದಲ್ಲಿ ರೈತರನ್ನು ಉದ್ದೇಶಿಸಿ ಮಾತನಾಡಿದ ದಾವಣಗೆರೆ ಕೃಷಿ ವಿಜ್ಞಾನ ಕೇಂದ್ರದ, ಕೀಟ ತಜ್ಞ ಡಾಕ್ಟರ ಬಸವನ ಗೌಡ ಅವರು ' ಕೃಷಿ ವೆಚ್ಚಗಳನ್ನು ತಗ್ಗಿಸಿ, ಅಧಿಕ ಇಳುವರಿ ಪಡೆಯುವುದು ಇಂದಿನ ಅಗತ್ಯವಾಗಿದೆ. ಇದಕ್ಕಾಗಿ ರೈತರು ಕೃಷಿ ಸಂಪರ್ಕ ಕೇಂದ್ರಗಳೊಂದಿಗೆ ನಿರಂತರ ಸಂಪರ್ಕದಲ್ಲಿರಬೇಕು ಎಂದರು.

<><><>

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲೂಕು ಕೊಡಿಗೇಹಳ್ಳಿಯಲ್ಲಿ 'ಕೃಷಿ ವಿಜ್ಞಾನಿಗಳ ನಡೆ, ರೈತರ ಕಡೆ' ಧ್ಯೇಯದೊಂದಿಗೆ ವಿಕಸಿತ ಕೃಷಿ ಸಂಕಲ್ಪ ಅಭಿಯಾನ ಆಯೋಜಿಸಲಾಯಿತು.

<><><>

ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ, ರಾಗಿ ಬೆಳೆಗೆ ಬೆಂಬಲ ಬೆಲೆ ಘೋಷಿಸಿರುವುದು ಕೋಲಾರ ಸಹಿತ ರಾಜ್ಯದ ರಾಗಿ ಬೆಳೆಗಾರರಿಗೆ ವರದಾನವಾಗಲಿದೆ ಎಂದು ಕರ್ನಾಟಕ ಮಾವು ಮಂಡಳಿ, ಮಾಜಿ ಅಧ್ಯಕ್ಷ ವಾಸುದೇವ ಹೇಳಿದರು. ಕೋಲಾರದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಒಂದು ಕ್ವಿಂಟಲ್ ರಾಗಿ' ಗೆ, 4 ಸಾವಿರದ 886 ರೂಪಾಯಿ ನಿಗದಿಪಡಿಸಲಾಗಿದ್ದು, ಇದರಿಂದ ಆರ್ಥಿಕ ಸಂಕಷ್ಟದಲ್ಲಿರುವ ರೈತರಿಗೆ ಅನುಕೂಲವಾಗಲಿದೆ ಎಂದರು.

<><><>

ರಾಜ್ಯದ ವಿವಿಧೆಡೆಗಳಲ್ಲಿ ಮಳೆ ಮುಂದುವರಿದಿದೆ, ದಕ್ಷಿಣ ಕನ್ನಡ ಜಿಲ್ಲೆ ಉಳ್ಳಾಲ ತಾಲೂಕಿನ, ಮಂಜನಾಡಿ ಗ್ರಾಮದ ಮೊಂಟೆಪದವಿನಲ್ಲಿ ಮನೆ ಮೇಲೆ ಗುಡ್ಡ ಕುಸಿದ ಪರಿಣಾಮ ಮನೆಯಡಿ ಸಿಲುಕಿದ 58 ವರ್ಷದ ಮಹಿಳೆ ಸೇರಿದಂತೆ, ಇಬ್ಬರು ಮಕ್ಕಳು ಮೃತಪಟ್ಟಿದ್ದಾರೆ. ಬೆಳ್ಮ ಗ್ರಾಮದ ಕಾನಕೆರೆ ಎಂಬಲ್ಲಿ ಗುಡ್ಡ ಕುಸಿದು ಮನೆ ಮೇಲೆ ಬಿದ್ದ ಪರಿಣಾಮ 10 ವರ್ಷದ ಬಾಲಕಿ ಮೃತಪಟ್ಟಿದ್ದಾರೆ. ಪಣಂಬೂರು, ತಣ್ಣೀರುಬಾವಿ, ಉಳ್ಳಾಲ, ಸೋಮೇಶ್ವರ ದಲ್ಲಿ ಕಡಲ್ಕೊರೆತ ಹೆಚ್ಚಾಗಿದೆ. ತಗ್ಗು ಪ್ರದೇಶಗಳು ಜಲಾವೃತಗೊಂಡಿವೆ.

<><><>

ಕಾವೇರಿ ಜಲಾನಯನ ಪ್ರದೇಶದಲ್ಲಿ ಉತ್ತಮ ಮುಂಗಾರು ಮಳೆ ಹಿನ್ನೆಲೆ ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣದಲ್ಲಿರುವ ಕೃ ್ಣರಾಜ ಸಾಗರ ಜಲಾಶಯದ ನೀರಿನ ಮಟ್ಟ ನೂರು ಅಡಿ ದಾಟಿದೆ.

<><><>

ತುಂಗಭದ್ರಾ ಜಲಾಶಯದಲ್ಲಿ, ಪ್ರಸಕ್ತ ವರ್ಷ ಶೇಕಡ 70 ರಷ್ಟು ಮಾತ್ರ ನೀರು ಸಂಗ್ರಹಿಸಬಹುದು ಎಂದು ಜಲಾಶಯ ತಜ್ಞ ಕನ್ನಯ್ಯ ಲಾಲ್ ಹೇಳಿಕೆ ನೀಡಿರುವ ಹಿನ್ನೆಲೆ, ರೈತರು ತಮ್ಮ ಎರಡನೇ ಬೆಳೆಗೆ ನೀರಿನ ಲಭ್ಯತೆಯ ಬಗ್ಗೆ ಆತಂಕದಲ್ಲಿದ್ದಾರೆ. ಈ ಬಗ್ಗೆ ಸರ್ಕಾರವು ಗಮನ ಹರಿಸಿ, ಜಲಾಶಯದ ನೀರಿನ ಸಂಗ್ರಹ ಸಾಮರ್ಥ್ಯದ ಬಗ್ಗೆ ಸ್ಪಷ್ಟನೆ ನೀಡಬೇಕು ಎಂದು ತುಂಗಭದ್ರಾ ರೈತ ಸಂಘದ ಅಧ್ಯಕ್ಷ ದರೂರು ಪುರುಷೋತ್ತಮ ಗೌಡ ಬಳ್ಳಾರಿಯಲ್ಲಿ ಆಗ್ರಹಿಸಿದ್ದಾರೆ.

<><><>

ರಾಷ್ಟ್ರಪತಿ ಭವನದಲ್ಲಿ ಜರುಗಿದ ವರ್ಣರಂಜಿತ ಸಮಾರಂಭದಲ್ಲಿ 2025ನೇ ಸಾಲಿನ ರಾಷ್ಟ್ರೀಯ ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿಗಳನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರದಾನ ಮಾಡಿದರು. ಬೆಂಗಳೂರಿನ ನಿಮ್ಹಾನ್ಸ್‌ನಲ್ಲಿ ಸೇವೆ ಸಲ್ಲಿಸುತ್ತಿರುವ, ಬಾನು ಎಂ.ಆರ್. ಸೇರಿದಂತೆ, ಆರೋಗ್ಯ ಸೇವಾ ವಲಯದಲ್ಲಿ ಉತ್ಕೃಷ್ಟ ಸೇವೆ ಸಲ್ಲಿಸಿದ, ದೇಶದ ವಿವಿಧ ಪ್ರದೇಶಗಳ ದಾದಿಯರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

<><><>

ಜರ್ಮನಿಯಲ್ಲಿ ಜುಲೈ 16 ರಿಂದ 27 ರವರೆಗೆ ನಡೆಯಲಿರುವ ವಿಶ್ವವಿದ್ಯಾಲಯಗಳ ಜಾಗತಿಕ ಕ್ರೀಡಾ ಕೂಟದಲ್ಲಿ ಪಾಲ್ಗೊಳ್ಳಲು, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಕ್ರೀಡಾ ದತ್ತು ಯೋಜನೆಯ 11 ಕ್ರೀಡಾಪಟುಗಳು ಆಯ್ಕೆಯಾಗಿದ್ದಾರೆ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾಕ್ಟರ ಎಂ. ಮೋಹನ ಆಳ್ವ ದಕ್ಷಿಣ ಕನ್ನಡ ಜಿಲ್ಲೆ ಮೂಡುಬಿದಿರೆಯಲ್ಲಿ ತಿಳಿಸಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

1). ರಾಷ್ಟ್ರದ, ದೇಶಿ ಉತ್ಪನ್ನಕ್ಕೆ, ಎಂ.ಎಸ್.ಎಂ.ಇ. ವಲಯದ ಕೊಡುಗೆ, ಶೇಕಡ 30 – ಶೋಭಾ ಕರಂದ್ಲಾಜೆ.

2). ಧಾರವಾಡ ಜಿಲ್ಲೆಯ, ಅಳ್ನಾವರ ಸೇರಿ, ರಾಜ್ಯದ 49 ತಾಲೂಕುಗಳಲ್ಲಿ, ಪ್ರಜಾಸೌಧ ನಿರ್ಮಾಣಕ್ಕೆ, ಒಪ್ಪಿಗೆ.

3). ವಿಕಸಿತ ಕೃಷಿ ಸಂಕಲ್ಪ ರಾಷ್ಟ್ರೀಯ ಅಭಿಯಾನ; ರೈತರ ಕಡೆ, ವಿಜ್ಞಾನಿಗಳ ನಡೆ.

4). ಇಂದು 'ವಿಶ್ವ ತಂಬಾಕು ರಹಿತ ದಿನ'; ರಾಜ್ಯಾದ್ಯಂತ ಜನ ಜಾಗೃತಿ, ಜಾಥಾ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ

<><><>